## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ

## ಚನ್ನರಾಯಪಟ್ಟಣ.

**ಸಿಸಿ.ಃ 1097/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಗಂಗಾಧರ | ಸಿ.ಡಬ್ಲ್ಯೂ 1 |
| ತಂದೆ/ಗಂಡನ ಹೆಸರು | ಃ | ಕೃಷ್ಣಪ್ಪಗೌಡ | ಪಿ.ಡಬ್ಲ್ಯೂ 1 |
| ವಯಸ್ಸು | ಃ | 45 ವರ್ಷ | |
| ಉದ್ಯೋಗ | ಃ | ಕೆ.ಎಸ್.ಆರ್.ಟಿ.ಸಿ. ಚಾಲಕ | ಪ್ರಮಾಣ ವಚನ ಬೋಧಿಸಲಾಯಿತು |
| ವಾಸ | ಃ | ಬೆಳತ್ತಂಗಡಿ | ದಿನಾಂಕಃ 25-04-2019 |

**ಮುಖ್ಯ ವಿಚಾರಣೆ ಃ- ಸರ್ಕಾರಿ ವಕೀಲರಿಂದ :**

ನಾನು ಹೀಗೆ 12 ವರ್ಷಗಳಿಂದ ಧರ್ಮಸ್ಥಳದ ಕೆ.ಎಸ್.ಆರ್.ಟಿ.ಸಿ ಡೀಪೋದಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನನ್ನು ದಿಃ 17-09-2013 ರಂದು ಬಸ್ಸು ಸಂಖ್ಯೆ ಕೆ.ಎ. 19 ಎಫ್ 2428 ರ ಮಾರ್ಗ ಸಂಖ್ಯೆ 110,111 ದಕ್ಕೆ ಚಾಲಕನಾಗಿ ನೇಮಕ ಮಾಡಿದ್ದು. ಆ ದಿನ ರಾತ್ರಿ 9 ಗಂಟೆಗೆ ಬೆಂಗಳೂರಿನಿಂದ ಹೊರಟು ಕುಕ್ಕೇಸುಬ್ರಮಣ್ಯಕ್ಕೆ ಹೋಗುತ್ತಿದ್ದಾಗ ದಂಡಿಗನಹಳ್ಳಿ ಹತ್ತಿರ ರಾತ್ರಿ ಸುಮಾರು 1-30 ಸಮಯದಲ್ಲಿ ರಸ್ತೆ ಎಡಬದಿಯಲ್ಲಿ ನಿಂತಿತ್ತು. ಆಗ ನನ್ನ ಹಿಂಬಭಾಗದ ಬಲಬದಿಯಿಂದ ಒಂದು ಲಾರಿ ವೇಗವಾಗಿ ಬದದಿತ್ತು. ಆಗ ನಾನು ನನ್ನ ವಾಹನವನ್ನು ಬ್ರೇಕ್ ಹಾಕಿ ನಿಧಾನ ಮಾಡಿದಾಗ ಹಿಂದುಗಡೆಯಿಂದ ಒಂದು ಕೆ.ಎ.18 ಎಫ್ 719 ರ ಕೆ.ಎಸ್.ಆರ್.ಟಿ.ಸಿ ಬಸ್ಸ ಹಿಂದುಗಡೆಯಿಂದ ಅತಿ ವೇಗವಾಗಿ ಬಂತು ನನ್ನ ಬಸ್ಸಿನ ಹಿಂಬದಿಗೆ ಡಿಕ್ಕಿ ಪಡೆಸಿದ್ದು. ಅದರ ಹಿಂದೆ ಮತ್ತೊಂದು ಅಂಬಾರಿ ಬಸ್ಸ ಸಂಖ್ಯೆ ಕೆ.ಎ. 19 ಎಫ್ 3030 ರ ವಾಹನ ಕೆ.ಎ.18 ಎಫ್ 719 ರ ವಾಹನದ ಹಿಂಬದಿಗೆ ಡಿಕ್ಕಿ ಪಡಿಸಿದ್ದು. ನಾನು ಚಾಲನೆ ಮಾಡುತ್ತಿದ್ದ ಬಸ್ಸಿಗೆ ಹಾಗೂ ಇತರು ಬಸ್ಸಿಗಳಿಗೆ ಜಖಂ ಆಗಿರುತ್ತದೆ. ಬಸ್ಸಿನಲ್ಲಿದ ಪ್ರಾಯಾಣಿಕರುಗಳಿಗೆ ಸಣ್ಣಪುಟ್ಟ ಗಾಯವಾಯಿತು.ಕೆ.ಎ.19 ಎಫ್ 3030 ರ ಚಾಲಕನಿಗೆ ಗಾಯವಾಗಿದ್ದು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಸೇರಿಸಲಾಯಿತು. ಆ ದಿನ ಕೆ.ಎ. 19 ಎಫ್ 3030 ರ ಬಸ್ಸನ್ನು ಚಾಲನೆ ಮಾಡುತ್ತಿದ್ದ ವ್ಯಕ್ತಿ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾರೆ. ಕೆ.ಎ. 18 ಎಫ್ 719 ರ ಚಾಲಕನನ್ನು ನೋಡಿದರೆ ಗುರುತಿಸಿರುತ್ತೇನೆ. ಈ ಬಗ್ಗೆ ನಾನು ಪೊಲೀಸ್

ಠಾಣೆಗೆ ದೂರು ನಿಡಿರುತ್ತೇನೆ. ಸದರಿ ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿ ಎ ಎಂದು ಗುರುತಿಸಲಾಯಿತು.

ನಂತರ ದಿಃ 18-09-2013 ರಂದು ಅಪಘಾತ ಸ್ಥಳಕ್ಕೆ ಬಂದು ಪೊಲೀಸರು 2 ಗಂಟೆಯಿಂದ 2-30 ರವರೆಗೆ ಮಹಜರ್ ಬರೆದಿರುತ್ತಾರೆ. ಆ ಕಾಲಕ್ಕೆ ಮೇಲ್ಕಂಡ ಮೂರು ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.ಮಹಜರ್ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಬಿ.ಆರ್.ಕೆ. ವಕೀಲರಿಂದ.</u>

ಪಿರ್ಯಾದರನ್ನು ನಾನು ಬರೆದಿರುತ್ತೇನೆ. ನಿಪಿ-1 ರಲ್ಲಿ ಬರದಿರುವ ವಿಚಾರ ಗೊತ್ತು. ನಿಪಿ-1 ನ್ನು ಪೊಲೀಸ ಠಾಣೆಯಲ್ಲಿ ಬರೆದಿದ್ದೇನೆ. ಆ ದಿನ ನನ್ನ ವಾಹನ ಗಂಟೆಗೆ 45 ಕಿ.ಮಿ. ವೇಗದಲ್ಲಿ ಹೋಗುತ್ತಿತ್ತು. ಮೇಲ್ಕಂಡ 2 ವಾಹನಗಳು ನನ್ನ ವಾಹನದ ಹಿಂದೆ ಇದ್ದವು ಎಂದರೆ ಸರಿ. ನನ್ನ ವಾಹನ ರಾಜಹಂಸ. ನನ್ನ ವಾಹನಕ್ಕೆ ಎರಡು ಕಡೆ ಕನ್ನಡಿ ಇದೆ ಎಂದರೆ ಸರಿ .ಎರಡು ಕಡೆ ಬರುವ ವಾಹನಗಳು ಕಾಣುತ್ತವೆ ಎಂದರೆ ಸರಿ . ಆ ದಿನ ಹಿಂದೆ ಬರುತ್ತಿದ್ದ ವಾಹನಗಳು ಎಷ್ಟು ದೂರದಲ್ಲಿ ಹಾಗೂ ಎಷ್ಟು ವೇಗದಲ್ಲಿ ಬರುತ್ತಿತ್ತು ಎಂದು ಗೊತ್ತಿಲ್ಲ. ಮುಂದೆ ಎಡ ಬದಿಯಲ್ಲಿ ನಿಂತಿದ್ದ ಲಾರಿ 100 ಮಿ. ಅಂತರದಲ್ಲಿ ಕಾಣಿಸಿತ್ತು. ನನ್ನ ಎಡಗಡೆ ನನ್ನ ಸಮನಾಗಿ ಹೋಗುತ್ತಿದ್ದ ಲಾರಿ ಮುಂದೆ ನಿಂತಿದ್ದ ಲಾರಿಯನ್ನು ನೋಡಿ ಎಡಗಡೆ ಬಂದಾಗ ನಾನು ನನ್ನ ವಾಹನವನ್ನು ಬ್ರೇಕ್ ಹಾಕಿದಾಗ ಸದರಿ ಲಾರಿಯು ಮುಂದೆ ಹೋಯಿತು. ನಾನು ಮತ್ತು ನನ್ನ ಎಡಗಡೆ ಬರುತಿದ್ದ ಲಾರಿ ಯಾವುದೇ ಮುನ್ಸೂಚನೆ ನೀಡದೆ ನಾನು ಬಲಗಡೆ ಬಂದಾಗ ಅಪಘಾತ ಆಗಿದೆ ಎಂದರೆ ಸರಿಯಲ್ಲ.

ನನ್ನ ಹಿಂದೆ ಬರುತ್ತಿದ್ದ ಕೆ.ಎ.18 ಎಫ್. 719 ರ ವಾಹನದ ಯಾವುದೇ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನಾನು ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿದ್ದೆನೆಂದರೆ ಸರಿಯಲ್ಲ. ನನ್ನ ಎಡಗಡೆ ಹೋಗುತ್ತಿದ್ದ ಲಾರಿಯ ಸಂಖ್ಯೆಯು ಗೊತ್ತಿಲ್ಲ. ಆ ದಿನ ಯಾವುದೇ ಲಾರಿ ನನ್ನ ಎಡಗಡೆ ಬರುತ್ತಿರಲಿಲ್ಲ ವಾದ್ದರಿಂದ ನನ್ನ ಅಪಘಾತ ಆಗಿದೆ ಎಂದರೆ ಸರಿಯಲ್ಲ.ಪೋಸರು ಆ ದಿನ ಯಾವುದೇ ಮಹಜರ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಸಹಿ ಮಾಡಿದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇಲ್ಲ</u>**

**ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಸ.ಇ.ಎ.ಒ.,**

**(ಎಸ್.ಚಿನ್ನಸ್ವಾಮಿ)**

**ಅಧಿಕ ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

.